# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1134

2) ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 18-12-2024

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2024-25ನೇ ಸಾಲಿನ ರಾಜ್ಯದ ಆಯವ್ಯಯದಲ್ಲಿ ಗಣಿಗಾರಿಕೆ ಪೀಡಿತ ಪ್ರದೇಶಗಳಾದ ಚಿತ್ರದುರ್ಗ ಹೊಳಲ್ಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳಲ್ಲಿ ಮೀನುಗಾರಿಕೆಯನ್ನು ಉತ್ತೇಜಿಸಲು ಸರ್ಕಾರವು ರೂ.06 ಕೋಟಿಗಳ ಅನುದಾನವನ್ನು ಘೋಷಿಸಿದ್ದು, ಸದರಿ ಅನುದಾನದ ಮೊತ್ತವನ್ನು ಯಾವ ಯಾವ ಕಾಮಗಾರಿಗಳಿಗೆ ಉಪಯೋಗಿಸ ಲಾಗುತ್ತದೆ.</td><td>2024-25ನೇ ಸಾಲಿನ ಆಯವ್ಯದಲ್ಲಿ "ಚಿತ್ರದುರ್ಗ, ಹೊಳಲ್ಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳ ಗಣಿಬಾಧಿತ ಪ್ರದೇಶದಲ್ಲಿ ಮೀನುಗಾರಿಕೆಯನ್ನು ಕೈಗೊಳ್ಳಲು 6 ಕೋಟಿ ರೂ. ವೆಚ್ಚ ಮಾಡಲಾಗುವುದು" ಎಂದು ಘೋಷಿಸಲಾಗಿದೆ. ಅನುದಾನವನ್ನು ಈ ಕೆಳಗಿನ ಕಾಮಗಾರಿಗಳಿಗೆ ನಿಗದಿ ಪಡಿಸಲಾಗಿದೆ.<br>(ರೂ.ಲಕ್ಷಗಳಲ್ಲಿ)
<table>
<tr><td>1)</td><td>ಅಸ್ತಿತ್ವದಲ್ಲಿರುವ ಮೀನುಮರಿ ಪಾಲನೆ ಕೇಂದ್ರಗಳ ಉನ್ನತೀಕರಣ ಮತ್ತು ದುರಸ್ತಿ ಕಾರ್ಯ</td><td>125.00</td></tr>
<tr><td>2)</td><td>ಸಾಮರ್ಥ್ಯ ಅಭಿವೃದ್ಧಿ ಹಾಗೂ ತರಬೇತಿ</td><td>156.90</td></tr>
<tr><td>3)</td><td>ಬಲಿತ ಬಿತ್ತನೆ ಮೀನುಮರಿ ದಾಸ್ತಾನು</td><td>102.00</td></tr>
<tr><td>4)</td><td>ಮೀನುಗಾರರಿಗೆ ಮೀನಿನ ಬಲೆಗಳ ಕೊರಾಕಲ್, ಲೈಫ್ ಜಾಕೆಟ್ ಲೈಫ್ ಬೋಯ್, ಐಸ್ ಬಾಕ್ಸ್ ಇತ್ಯಾದಿ ಮೀನುಗಾರಿಕೆ ಅಗತ್ಯಗಳನ್ನು ಒದಗಿಸುವುದು</td><td>250.00</td></tr>
</table>
</td></tr>
<tr><td>ಆ)</td><td>ಇಲ್ಲಿಯವರೆಗೆ ಯಾವುದೇ ಕಾಮಗಾರಿ ಕೈಗೆತ್ತಿಕೊಳ್ಳ ದಿರುವುದಕ್ಕೆ ಕಾರಣಗಳೇನು;</td><td>ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ಕರ್ನಾಟಕ ಮೈನಿಂಗ್ ಎನ್ವಿರಾನ್ಮೆಂಟ್ ರೆಸ್ಟೋರೇಷನ್ ಕಾರ್ಪೋರೇಷನ್‌ಗೆ ಆಡಳಿತಾತ್ಮಕ ಅನುಮೋದನೆ ಕೋರಿ ಸಲ್ಲಿಸಲಾಗಿದ್ದು ಪರಿಶೀಲನೆಯಲ್ಲಿದೆ.</td></tr>
<tr><td>ಇ)</td><td>ನಬಾರ್ಡ್ ಬೆಂಬಲದೊಂದಿಗೆ ರೂ. 20 ಕೋಟಿ ವೆಚ್ಚದಲ್ಲಿ 16 ಮೀನು ಬೀಜ ಉತ್ಪಾದನಾ ಕೇಂದ್ರಗಳ ಆಧುನೀಕರಣವನ್ನು ಕೈಗೊಳ್ಳ ಲಾಗುವುದು ಎಂದು ಆಯವ್ಯಯದಲ್ಲಿ ಘೋಷಿಸಿದ್ದು, ಪ್ರಸ್ತುತ ಯಾವ ಹಂತದಲ್ಲಿದೆ? (ಮಾಹಿತಿ ನೀಡುವುದು)</td><td>2024-25 ನೇ ಸಾಲಿನ ಆಯವ್ಯದಲ್ಲಿ "ರಾಜ್ಯದಲ್ಲಿ 16 ಮೀನುಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣವನ್ನು ನಬಾರ್ಡ್ ಸಹಯೋಗದೊಂದಿಗೆ 20 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳ ಲಾಗುವುದು" ಎಂದು ಘೋಷಿಸಲಾಗಿದ್ದು, ಯೋಜನೆಯ ಅನುಷ್ಠಾನಕ್ಕೆ ತಾತ್ವಿಕ ಅನುಮೋದನೆ ನೀಡಲಾಗಿದೆ. ಪ್ರಸ್ತುತ 6 ಮೀನುಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣವನ್ನು ರೂ.20.00 ಕೋಟಿ ಅಂದಾಜು ವೆಚ್ಚದಲ್ಲಿ ನಬಾರ್ಡ್ ಸಹಯೋಗದೊಂದಿಗೆ RIDF-Tranch-30 ರಡಿಯಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.</td></tr>
</table>

ಸಂಖ್ಯೆ: ಪಸಂಮೀ ಇ-250 ಮೀಇಯೋ 2024

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು